# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1397

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ.ಗೌಡ (ಪಧವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 22.08.2025

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿಗೆ ಇರುವ ಅರ್ಹತೆ ಏನು; ಯಾರು ವೇತನ ಬಡ್ತಿಗೆ ಅರ್ಹರಾಗಿರುವುದಿಲ್ಲ; | ಕರ್ನಾಟಕ ಸರ್ಕಾರಿ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳು, 1991 ರನ್ವಯ ಹಿರಿಯ ವೇತನ ಶ್ರೇಣಿಗೆ ಮುಂಬಡ್ತಿಯನ್ನು ನೀಡಲು ಈ ನಿಯಮಗಳು ಪ್ರಾರಂಭವಾಗುವ ದಿನಾಂಕಕ್ಕೆ ಅಥವಾ ನಂತರದ ದಿನಕ್ಕೆ ಆತ ಒಂದೇ ಹುದ್ದೆಯಲ್ಲಿ ನಿರಂತರವಾಗಿ 15 ವರ್ಷಗಳಿಗಿಂತ ಕಡಿಮೆ ಇಲ್ಲದೆ ಅಂತಹ ಹುದ್ದೆಯಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿರಬೇಕು.<br><br>• ನೌಕರರ ಸೇವಾ ದಾಖಲೆ ತೃಪ್ತಿಕವಾಗಿರಬೇಕು.<br>• ಅವರಿಗೆ ಪದೋನ್ನತಿಯ ಅವಕಾಶಗಳಿದ್ದು, ಅದಕ್ಕೆ ಅನ್ವಯಿಸುವ ನೇಮಕಾತಿ ನಿಯಮಾವಳಿ ಅನುಸಾರವಾಗಿ ಪದೋನ್ನತಿಗೆ ಅರ್ಹನಾಗಿರಬೇಕು.<br>• ಕರ್ನಾಟಕ ಸರ್ಕಾರಿ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳು, 1991ರ ನಿಯಮಗಳನ್ವಯ ಅರ್ಹರಿರುವ ನೌಕರರಿಗೆ ಮಾತ್ರ ಮುಂಬಡ್ತಿಯನ್ನು ನೀಡಲು ಅವಕಾಶವಿರುತ್ತದೆ. ಈ ನಿಯಮಗಳ ಪಾಲನೆ ಆಗದಿದ್ದಲ್ಲಿ ಅಂತಹ ನೌಕರರು 15 ವರ್ಷಗಳ ಸ್ವಯಂಚಾಲಿತ ವಿಶೇಷ ವೇತನ ಬಡ್ತಿಗೆ ಅರ್ಹರಿರುವುದಿಲ್ಲ. |
| (ಆ) | ರಾಜ್ಯದಲ್ಲಿ 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿಗೆ ಅರ್ಹರಿರುವ ಪಂಚಾಯತ್ ಅಧಿಕಾರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. |

| | | |
|---|---|---|
| (ಇ) | 15 ವರ್ಷಗಳ ಸ್ವಯಂ ಚಾಲಿತ ವೇತನ ಬಡ್ತಿಗೆ ಎಷ್ಟು ಜನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅರ್ಜಿ ಸಲ್ಲಿಸಿದ್ದಾರೆ; ಎಷ್ಟು ಜನರಿಗೆ ವೇತನ ಬಡ್ತಿಯ ಆದೇಶ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) ಉಳಿದ ಅಧಿಕಾರಿಗಳಿಗೆ ನೀಡದೆ ಇರಲು ಕಾರಣಗಳೇನು; | |
| (ಈ) | ಎಲ್ಲರಿಗೂ ಸಕಾಲದಲ್ಲಿ ಸ್ವಯಂ ಚಾಲಿತ ವೇತನ ಬಡ್ತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ:ಕೆಪಿಆರ್‌ಸಿ-ಜಿಪಿಎ/ಪಿಡಿಓ/197/2023 ದಿನಾಂಕ:01.07.2025 ರನ್ವಯ ಪ್ರಸ್ತುತ 15 ವರ್ಷ ಪೂರ್ಣಗೊಂಡ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ ಹೆಚ್ಚಿಗೆ ಇರುವುದರಿಂದ ಮತ್ತು 15 ವರ್ಷಗಳ ಸ್ವಯಂಚಾಲಿತ ವಿಶೇಷ ಮುಂಬಡ್ತಿಯನ್ನು ನಿಗಧಿತ ಅವಧಿಯೊಳಗೆ ಮಂಜೂರು ಮಾಡಲು ಅನುವಾಗುವಂತೆ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಸಲುವಾಗಿ 15 ವರ್ಷಗಳ ಸ್ವಯಂಚಾಲಿತ ವಿಶೇಷ ಮುಂಬಡ್ತಿಯನ್ನು ನೀಡುವ ಅಧಿಕಾರವನ್ನು ಆಯಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿರುತ್ತದೆ. |

**ಸಂಖ್ಯೆ:** ಗ್ರಾಅಪ 641 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.